## ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.

**ಅಪರಾಧ ಪ್ರಕರಣ ಸಂಖ್ಯೆ: 502/2022**

| | | |
|---|---|---|
| **ಸಾಕ್ಷಿಯ ಹೆಸರು** | ಸಂದೇಶ | ಚಾಸಾ-3 |
| **ತಂದೆಯ ಹೆಸರು** | ಮಹೇಶ | |
| **ಉದ್ಯೋಗ** | ಖಾಸಗಿ ಕೆಲಸ | ಪ್ರಾಸಾ-1 |
| **ವಾಸ ಸ್ಥಳ** | ಬೆಂಗಳೂರು | |
| **ದಿನಾಂಕ: 29.08.2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆ:** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

1ನೇ ಆರೋಪಿ ಪರಿಚಯ ಇದೆ , ದಿ: 11-02-22 ರಂದು ರಾತ್ರಿ 8 ಗಂಟೆಗೆ ನಾನು ಹಾಗೂ 1ನೇ ಆರೋಪಿ ಅರಕಲಗೂಡಿಗೆ ದ್ವಿಚಕ್ರ ವಾಹನ ನಂ. ಕೆಎ-13-ಇಎಂ-1100 ರಲ್ಲಿ ಬಂದಿರುತ್ತೇವೆ. ಸದರಿ ವಾಹನವನ್ನು 1ನೇ ಆರೋಪಿ ಚಾಲನೆ ಮಾಡುತ್ತಿದ್ದರು ನಾನು ಹಿಂಬದಿಯಲ್ಲಿ ಕುಳಿತ್ತಿದ್ದೆ , ಎದುರಿನಿಂದ ಬಂದ ಒಂದು ದ್ವಿಚಕ್ರ ವಾಹನ ನಮ್ಮ ವಾಹನಕ್ಕೆ ಅಪಘಾತ ಮಾಡಿರುತ್ತದೆ. ಸದರಿ ಅಪಘಾತವು ಸಾಲಗೇರಿ ಶಾಲೆಯ ಹತ್ತಿರ ಆಗಿರುತ್ತದೆ. ಆ ಕಾಲಕ್ಕೆ 1ನೇ ಆರೋಪಿಗೆ ಎಡಗೈ ಮೂಳೆ ಮುರಿದಿರುತ್ತದೆ. ನನಗೆ ತರಚಿದ ಗಾಯಗಳಾಗಿತ್ತು. ಸದರಿ ಅಪಘಾತವು ಇಬ್ಬರು ಆರೋಪಿಗಳ ತಪ್ಪಿನಿಂದ ಆಗಿರುತ್ತದೆ. ಈ ವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು:** ಆರೋಪಿ ಪರ ವಕೀಲರು **ಶ್ರೀ. ಜಿ ಜಿ ಆರ್** ರವರಿಂದ.

ಎದುರಿನಿಂದ ಬಂದ ವಾಹನದ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ಎದುರಿನಿಂದ ಬಂದ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಅಥವಾ 1ನೇ ಆರೋಪಿ ಎದುರಿನಿಂದ ವಾಹನದ ಚಾಲಕನ ವಿರುದ್ದ ದೂರು ನೀಡಿಲ್ಲ. ಸದರಿ ಅಪಘಾತವು 1ನೇ ಆರೋಪಿಯ ತಪ್ಪಿನಿಂದಾಗಿರುತ್ತದೆ ಎಂದು ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ, ನಾನು ಮತ್ತು 1ನೇ ಆರೋಪಿ ಸ್ನೇಹಿತರು ಎಂದರೆ ಸರಿ. ನಾವು ಹೋಗುತ್ತಿದ್ದ ವಾಹನಕ್ಕೆ ಎದುರಿನಿಂದ ಯಾವುದೇ ವಾಹನ ಬಂದು ಅಪಘಾತ ಪಡಿಸದಿದ್ದರೂ ಸಹಾ 1ನೇ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**